**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ.**

ಸಿ.ಸಿ.ನಂ: **1145/2018**

ಸಿಡಬ್ಲೂ: **3**

ಪಿ.ಡಬ್ಲೂ: **3**

ಸಾಕ್ಷಿಯ ಹೆಸರು : ರಾಮನಿಂಗ ಗೋವಿಂದ ಜೇಂಡೆ

ವಯಸ್ಸು : **45** ವರ್ಷ

ಉದ್ಯೋಗ : ಒಕ್ಕಲುತನ

ವಾಸ್ತವ್ಯ : ಹರೋರಿ

ದಿನಾಂಕ: **16-01-2025**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಸರ್ಕಾರಿ ವಕೀಲರಿಂದ:-**

ಸಾಕ್ಷಿದಾರರಿಗೆ ಈಗ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ಒಪ್ಪಿ ಕೊಂಡಿದ್ದರಿಂದ ಸದರಿ ಸ್ಥಳ ಪಂಚನಾಮೆಯನ್ನು **ನಿ ಪಿ 2** ಎಂದು ಹಾಗೂ ಸಾಕ್ಷಿದಾರರ ಸಹಿಯನ್ನು **ನಿ ಪಿ 2(ಎ)** ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಭಾಲ್ಕಿ ಗ್ರಾಮದಲ್ಲಿ ದಿ: 23.12.2017 ರಂದು ಮುಂಜಾನೆ 10 ಗಂಟೆಗೆ ಮಾಡಿರುತ್ತೇನೆ. ಸದರಿ ಸಹಿಯನ್ನು ಪಂಚನಾಮೆಯ ಸಲುವಾಗಿ ಮಾಡಿರುತ್ತೇನೆ. ಸದರಿ ಸಮಯದಲ್ಲಿ ಚಾಸಾ 2, ನಾನು, ಚಾಸಾ 4, 1 ಹಾಗೂ 9 ಹಾಜರಿದ್ದರು. ಘಟನಾ ಸ್ಥಳವನ್ನು ಚಾಸಾ 4 ರವರು ತೋರಿಸಿರುತ್ತಾರೆ. ಚಾಸಾ 4 ರವರು ನನಗೆ ಸಂಬಂಧಿಕರಾಗಬೇಕು. ಚಾಸಾ 4 ರವರು ಇದೇ ಜಾಗದಲ್ಲಿ ಜಗಳವಾಗಿದ್ದು ಎಂದು ಹೇಳಿರುತ್ತಾರೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀಮತಿ ಎಸ್ ಜೆ ಪಿ ವಕೀಲರಿಂದ:-**

ನನಗೆ ಪಂಚನಾಮೆಯ ಸಲುವಾಗಿ ಪೋಲೀಸರು ಯಾವುದೇ ನೋಟೀಸನ್ನು ನೀಡಿಲ್ಲ. ನನಗೆ ಜಗಳದ ಬಗ್ಗೆ ಗೊತ್ತಿಲ್ಲ, ಆದರೆ ಪಂಚನಾಮೆಯ ಬಗ್ಗೆ ಮಾತ್ರ ಗೊತ್ತಿದೆ. ನಾನು ಪಂಚನಾಮೆ ದಿವಸವೇ ಚಾಸಾ 4 ರವರನ್ನು ಭೇಟಿಯಾಗಿದ್ದೆ. ನಿ ಪಿ 2 ರಲ್ಲಿ ಏನು ಬರೆಯಲಾಗಿದೆ ಎಂಬ ಬಗ್ಗೆ ನನಗೆ ಮಾಹಿತಿ

ಇಲ್ಲ. ಸದರಿ ಜಾಗದ ಚಕಬಂದಿ ನನಗೆ ಹೇಳಲು ಬರುವುದಿಲ್ಲ. ನಾನು ಕೇವಲ ಒಂದು ಸಹಿಯನ್ನು ಮಾತ್ರ ಮಾಡಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 4 ರವರು ನನ್ನ ಸಂಬಂಧಿಕರಾಗಿರುವ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲ ಸಂಗತಿಗಳು ಸುಳ್ಳು ಇರುತ್ತವೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಭಾರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಖಾನಾಪೂರ